# ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು ವಿರಾಜಪೇಟೆ

***ಸಿ.ಸಿ. ಸಂಖ್ಯೆ : 815/2017***

***ಚಾಸಾ : 17***

***ಪ್ರಾಸಾ : 11***

| | | |
|---|---|---|
| **ಹೆಸರು** | : | ವಿ ಪಿ ರಮೇಶ್ |
| **ತಂದೆಯ ಹೆಸರು** | : | ಪುಟ್ಟರಾಜು |
| **ವಯಸ್ಸು** | : | 53 ವರ್ಷ |
| **ಉದ್ಯೋಗ** | : | ವಕೀಲರು |
| **ವಾಸಸ್ಥಳ** | : | ಮಗ್ಗುಲ ಗ್ರಾಮ |

## ದಿನಾಂಕ : *10-01-2023* ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

***ಮುಖ್ಯ ವಿಚಾರಣೆ : ಮಾನ್ಯ ಸ.ಸ.ಅ. ರವರಿಂದ.***

ದಿನಾಂಕ 05-09-2015 ರಂದು ಆರೋಪಿ ಹಾಗೂ ಚಾಸಾ-1 ರವರು ನಮ್ಮ ಕಛೇರಿಗೆ ಬಂದು, ಒಂದು ಒಪ್ಪಂದ ಪತ್ರಕ್ಕೆ ನೋಟರಿ ಮಾಡಿಕೊಡುವಂತೆ ತಿಳಿಸಿದ್ದು, ಸದರಿ ಒಪ್ಪಂದದ ಪ್ರಕಾರ ಆರೋಪಿಯು ತನ್ನ ಮೊದಲನೇ ಹೆಂಡತಿ ಹಲವು ವರ್ಷದಿಂದ ಎಲ್ಲಿ ಇರುತ್ತಾರೆಂದು ನನಗೆ ಮಾಹಿತಿ ಇರುವುದಿಲ್ಲ. ಆದ್ದರಿಂದ ಚಾಸಾ-1 ರವರನ್ನು ಎರಡನೇ ಮದುವೆಯಾಗುವುದಾಗಿ ಹಾಗೂ ಅವರ ಪಾಲನೆ ಪೋಷಣೆಯನ್ನು ತಾನೇ ಮಾಡುವುದಾಗಿ ಒಪ್ಪಿಕೊಂಡಿರುತ್ತಾರೆ. ಸದರಿ ಒಪ್ಪಂದ ಪತ್ರಕ್ಕೆ ಆರೋಪಿ ಹಾಗೂ ಚಾಸಾ-1 ಇಬ್ಬರು ಸಹಿ ಮಾಡಿರುತ್ತಾರೆ. ಸದರಿ ಒಪ್ಪಂದ ಪತ್ರಕ್ಕೆ ನಾನು ನೋಟರಿ ಮಾಡಿ ಕೊಟ್ಟಿರುತ್ತೇನೆ. ಸಾಕ್ಷಿಗೆ ನಿಪಿ16 ನ್ನು ತೋರಿಸಲಾಗಿ ಸಾಕ್ಷಿಯು ತಾನು ಚಾಸಾ-1 ಹಾಗೂ ಆರೋಪಿ ಬರೆದುಕೊಂಡು ಬಂದ ಒಪ್ಪಂದ ಪತ್ರವೆಂದು ಗುರುತಿಸಿ, ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸುತ್ತಾರೆ, ಸಾಕ್ಷಿ ಗುರುತಿಸಿದ ಮೇರೆಗೆ ಸಾಕ್ಷಿಯ ಸಹಿಯನ್ನು ನಿಪಿ16 ಬಿ ಎಂದು ಗುರುತಿಸಲಾಯಿತು. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಆರೋಪಿಯನ್ನು ನೋಡಿ ಗುರುತಿಸುತ್ತಾರೆ.

***ಪಾಟೀ ಸವಾಲು : ಶ್ರೀ ಬಿ ಎಸ್ ಪಿ ಆರೋಪಿ ಪರ ವಕೀಲರಿಂದ***

ಒಂದು ಒಪ್ಪಂದ ಪತ್ರ ಮಾಡಬೇಕಾದರೆ ಎರಡು ಪಕ್ಷದವರು ಹಾಜರಾಗಬೇಕೆಂದರೆ ಸರಿ. ಎರಡು ಪಕ್ಷಗಾರರ ಪೂರ್ತಿ ಹೆಸರು ಹಾಗೂ ವಿಳಾಸವನ್ನು ಸದರಿ ಪತ್ರದಲ್ಲಿ ನಮೂದಿಸಬೇಕೆಂದರೆ ಸರಿ. ಸದರಿ ಪತ್ರದ ಪ್ರಕಾರ ಎರಡು ಪಕ್ಷಗಾರರಿಗೆ ಅದರಲ್ಲಿರುವ

ಷರತ್ತುಗಳಿಗೆ ಬದ್ಧರಾಗ ಬೇಕಾಗುತ್ತದೆ ಎಂದರೆ ಸರಿ. ನಿಪಿ 16 ರಲ್ಲಿ ಬರೆದಿರುವ ಈಗ ಓದಿ ಹೇಳಿರುವ ಅರ್ಜಿಯ ಸಂಗತಿಯನ್ನು ಓದಿ ತಿಳಿದುಕೊಂಡಿರುತ್ತೇನೆ ಎಂದು ಬರೆಸಿದ್ದು, ಅದು ಯಾವ ಅರ್ಜಿ ಎನ್ನುವ ಪ್ರಶ್ನೆಗೆ ಸಾಕ್ಷಿಯು ನಿಪಿ16 ಒಪ್ಪಂದ ಪತ್ರ ಎಂದು ನುಡಿಯುತ್ತಾರೆ. ಹೇಳಿಕೆ ಹಾಗೂ ಒಪ್ಪಂದ ಪತ್ರ ಎರಡು ಬೇರೆ ಬೇರೆ ಎಂದರೆ ಸರಿ. ನಿಪಿ 16 ರ ಮೊದಲ ಪುಟದಲ್ಲಿ ಹೇಳಿಕೆ ಹಾಗೂ ಒಪ್ಪಂದ ಪತ್ರ ಎನ್ನುವ ಬರವಣಿಗೆ ಬೇರೆ ಬೇರೆ ಬರವಣಿಗೆಯಲ್ಲಿ ಇದೆ ಎಂದರೆ ಸರಿ. ಸದರಿ ಪತ್ರದಲ್ಲಿ ನಾನು ಯಾವುದೇ ತಿದ್ದುಪಡಿ ಮಾಡಿರುವ ಬಗ್ಗೆ ನಮೂದು ಮಾಡಿರುವುದಿಲ್ಲ. ನಿಪಿ 16 ರಲ್ಲಿ ಪೋಲಿಸ್ ವೃತ್ತ ನಿರೀಕ್ಷಕರು, ವಿರಾಜಪೇಟೆ ಎನ್ನುವ ಸಹಿ ಹಾಗೂ ಸೀಲು ನೋಟರಿ ಮಾಡಲು ಬಂದ ಸಮಯದಲ್ಲಿ ಇದ್ದಿರಲಿಲ್ಲ.

ನಿಪಿ 16 ನ್ನು ಯಾರಿಗೆ ನೀಡಬೇಕೆನ್ನುವುದನ್ನು ಚಾಸಾ1 ರವರಾಗಲಿ ಅಥವಾ ಆರೋಪಿಯಾಗಲಿ ನನಗೆ ತಿಳಿಸಿರುವುದಿಲ್ಲ. ನಿಪಿ 16 ರಲ್ಲಿರುವ ಸಹಿ ಆರೋಪಿಯದ್ದಲ್ಲ ಎಂದರೆ ಸರಿಯಲ್ಲ. ನಿಪಿ16 ರಲ್ಲಿರುವ ಸಂಗತಿಯನ್ನು ಚಾಸಾ1 ರವರಿಗಾಗಲಿ ಹಾಗೂ ಆರೋಪಿಗಾಗಲಿ ಓದಿ ಹೇಳಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ನೋಟರಿ ಮಾಡಿದ ವಿಚಾರವನ್ನು ನನ್ನ ಲೆಡ್ಜರ್ ನಲ್ಲಿ ನಮೂದು ಮಾಡಿದ್ದೇನೋ ಇಲ್ಲವೋ ಎನ್ನುವುದನ್ನು ನೋಡಿ ಹೇಳಬೇಕು. ನ್ಯಾಯಾಲಯ ಅಪೇಕ್ಷೆಪಟ್ಟಲಿ ನಾನು ಹಾಜರುಪಡಿಸುತ್ತೇನೆ.

ಮರು ವಿಚಾರಣೆ ಇರುವುದಿಲ್ಲ.

ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಿದೆ.

ಓ. ಹೇ. ಕೇ. ಸ. ಇದೆ.

ಸಹಿ/-

**(ಸಂತೋಷ ಕೊಠಾರಿ)**
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ. ವಿರಾಜಪೇಟೆ.